ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಶುಕ್ರವಾರ, ದಿನಾಂಕ : 26ನೇ ಜುಲೈ, 2019

ಚಲನಚಿತ್ರ ಮಂದಿರಗಳ ಮೇಲಿನ ತೆರಿಗೆಯ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-

636(734) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2016-17ನೇ ಸಾಲಿನ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಚಲನಚಿತ್ರ ಮಂದಿರಗಳಿಂದ (film theatre) ಸಂಗ್ರಹಿಸಲಾದ ಎನ್‌ರೋಲ್‌ಮೆಂಟ್ ಮತ್ತು ರಿನೀವಲ್ ತೆರಿಗೆಯ ಮೊತ್ತವೆಷ್ಟು ;

(ಆ) 2016-17ನೇ ಸಾಲಿನ ಅವಧಿಯಲ್ಲಿ ಎಷ್ಟು ಚಲನಚಿತ್ರ ಮಂದಿರಗಳು (film theatre) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎನ್‌ರೋಲ್‌ಮೆಂಟ್ ಮತ್ತು ರಿನೀವಲ್ ಆಗಿವೆ ;

(ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಗರದಲ್ಲಿರುವ ಚಲನಚಿತ್ರ ಮಂದಿರಗಳ (film theatre)ಸರ್ವೆ ನಡೆಸಿ ಹಾಗೂ ಅವುಗಳಲ್ಲಿರುವ ಸುರಕ್ಷಾ ಕ್ರಮಗಳ ಬಗ್ಗೆ ಪರಿಶೀಲಿಸಿದೆಯೇ ;

(ಈ) ನಗರದ ಚಲನಚಿತ್ರ ಮಂದಿರಗಳಲ್ಲಿ ಆಹಾರ ವಸ್ತುಗಳನ್ನು ಮಾರುಕಟ್ಟೆ ದರಕ್ಕಿಂತ ದುಪ್ಪಟ್ಟು ದರದಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು ?